## ಜೇನು ಕೃಷಿ

# ಈ ಮಹಿಳೆ ಮಾದರಿ!

ಇದುವರೆಗೆ ಪುರುಷ ಪ್ರಾಬಲ್ಯವಿದ್ದ ಜೇನು ಕೃಷಿ ಕ್ಷೇತ್ರಕ್ಕೆ ಮಹಿಳೆಯರೂ ಸಾಕಷ್ಟು ಸಂಖ್ಯೆಯಲ್ಲಿ ಕಾಲಿಟ್ಟಿದ್ದಾರೆ. ಈ ಸಾಧನೆ ಮಾಡಿರುವ ಶಿರಸಿಯ ಗೃಹಿಣಿಯೊಬ್ಬರು ಈ ಕೃಷಿಯಿಂದ ನಿಗದಿತ ಆದಾಯ ಪಡೆಯುತ್ತಿದ್ದು, ಇತರರಿಗೆ ಮಾದರಿಯಾಗಿದ್ದಾರೆ.

■ ಚಿತ್ರ– ಬರಹ: **ಕೀರ್ತಿ ತಂತ್ರಿ**



ಹೊಂಬಣ್ಣದೊಂದಿಗೆ ಮಿರುಗುವ ಸ್ನಿಗ್ಧ ದ್ರವ ಜೇನು ತುಪ್ಪ ಎಷ್ಟು ಸವಿಯೋ ಅಷ್ಟೇ ಕಾಯಿಲೆಗಳಿಗೆ ಔಷಧವಾಗಿಯೂ ಪ್ರಯೋಜನಕಾರಿ. ಮಂದವಾದ ಜೇನು ಹನಿಯನ್ನು ಸಾಮಾನ್ಯ ಕೆಮ್ಮಿನಿಂದ ಹಿಡಿದು ಅಸ್ತಮಾ ಕಾಯಿಲೆವರೆಗೂ ಆಯುರ್ವೇದದಲ್ಲಿ ಔಷಧವಾಗಿ ಬಳಸಲಾಗುತ್ತದೆ. ಅಷ್ಟೇ ಏಕೆ, ಮನೆ ಮದ್ದಿನಲ್ಲೂ ಇದರ ವ್ಯಾಪಕ ಬಳಕೆಯಿದೆ.

ಈಗ ನಗರವಾಸಿಗಳಿಗೂ ಕೂಡಾ ಜೇನು ತುಪ್ಪ ಅಪರೂಪದ ವಸ್ತುವೇನೂ ಅಲ್ಲ. ಚೆಂದದ ಬಾಟಲ್‌ನಲ್ಲಿ ನೀಟಾಗಿ ಪ್ಯಾಕ್ ಮಾಡಿದ ಜೇನು ತುಪ್ಪ ಬಹುತೇಕ ಎಲ್ಲಾ ಸೂಪರ್ ಬಜಾರ್‌ಗಳಲ್ಲಿ ಲಭ್ಯ. ಆದರೆ ಪರಿಶುದ್ಧತೆಗೆ ನೇರ ಜೇನು ಸಾಕಣೆಕೆದಾರರನ್ನು ಹುಡುಕಿ ಕೊಂಡು ಹೋಗುವ ಪರಿಪಾಠ ಈಗಲೂ ಇದೆ. ಆಕರ್ಷಕ ಬಣ್ಣ, ರುಚಿಯೊಂದಿಗೆ ಸೆಳೆಯುವ ಜೇನು ತುಪ್ಪದ ಹಿಂದೆ ಸಿಟ್ಟಿಗೆದ್ದರೆ ಟಂಯ್ ಎಂದು ಕಚ್ಚಿ ಅಂಬಿಡುವ ಇದರ ತಯಾರಕ ಜೇನು ನೊಣವೂ ಇದೆ ಎಂಬುದು ನಾಲಿಗೆಯಿಂದ ಜೇನು ಹನಿಯನ್ನು ಸೀಪುವಾಗ ನೆನಪಾಗದೇ ಇರದು.

ಜೇನು ನೊಣ ಕಚ್ಚುವ ಭಯ, ಅವುಗಳನ್ನು ಸಾಕುವ ಸಂಕೀರ್ಣ ಪ್ರಕ್ರಿಯೆಯಿಂದಾಗಿಯೇ ಜೇನು ಕೃಷಿ ಎಂಬುದು ಪುರುಷರ ಕೆಲಸ ಎಂಬ ಭಾವನೆ ಬಹುತೇಕರಲ್ಲಿದೆ. ಆದರೆ ಶಿರಸಿ ಸಮೀಪದ ತುಂಬೇಮನೆಯ ಗೃಹಿಣಿ ವಿನುತಾ ಪರಮೇಶ್ವರ ಹೆಗಡೆ ಈ ಕ್ಷೇತ್ರದಲ್ಲೂ ಮಹಿಳೆಯರು ಸಕ್ರಿಯರಾಗಿ ತೊಡಗಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ.

ಮನೆಯ ಸುತ್ತ ಇರುವ ವಿಶಾಲವಾದ ಕೈತೋಟ ಹಾಗೂ ಹೂದೋಟ ಅವರ ಈ ಜೇನು ಕೃಷಿಯ ನೆರವಿಗೆ ಬಂದಿವೆ. ಮರದ ಜೇನು ಪೆಟ್ಟಿಗೆಯನ್ನು ಸೊಸೈಟಿಯಿಂದ

